# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **: 2216** |
| **ಮಾನ್ಯ ಸದಸ್ಯರ ಹೆಸರು** | **: ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | **: 26.03.2026** |
| **ಉತ್ತರಿಸುವ ಸಚಿವರು** | **: ಗೃಹ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳ್ಳತನ ಮತ್ತು ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು (ಕಳೆದ 03 ವರ್ಷಗಳ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 03 ವರ್ಷಗಳಲ್ಲಿ ದಾಖಲಾದ ಕಳ್ಳತನ ಮತ್ತು ದರೋಡೆ ಪ್ರಕರಣಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ:- |

**ಕಳ್ಳತನ ಪ್ರಕರಣಗಳ ವಿವರ**

| ಕ್ರ. ಸಂ. | ತಾಲ್ಲೂಕು | ಕಳ್ಳತನ | | | |
|---|---|---|---|---|---|
| | | 2023 | 2024 | 2025 | 2026 |
| 1. | ತುಮಕೂರು | 493 | 384 | 283 | 55 |
| 2. | ಕುಣಿಗಲ್ | 98 | 99 | 101 | 13 |
| 3. | ತುರುವೇಕೆರೆ | 36 | 37 | 43 | 11 |
| 4. | ತಿಪಟೂರು | 90 | 68 | 74 | 4 |
| 5. | ಚಿಕ್ಕನಾಯಕನಹಳ್ಳಿ | 41 | 33 | 35 | 8 |
| 6. | ಗುಬ್ಬಿ | 60 | 100 | 76 | 15 |
| 7. | ಶಿರಾ | 69 | 87 | 58 | 5 |
| 8. | ಕೊರಟಗೆರೆ | 152 | 116 | 110 | 5 |
| 9. | ಮಧುಗಿರಿ | 64 | 54 | 50 | 10 |
| 10. | ಪಾವಗಡ | 58 | 71 | 69 | 8 |
| | **ಒಟ್ಟು** | **1161** | **1049** | **899** | **134** |

**ದರೋಡೆ ಪ್ರಕರಣಗಳ ವಿವರ**

| ಕ್ರ. ಸಂ. | ತಾಲ್ಲೂಕು | ದರೋಡೆ | | | |
|---|---|---|---|---|---|
| | | 2023 | 2024 | 2025 | 2026 |
| 11. | ತುಮಕೂರು | 01 | 01 | 05 | 0 |
| 12. | ಕುಣಿಗಲ್ | 01 | 0 | 01 | 0 |
| 13. | ತುರುವೇಕೆರೆ | 0 | 0 | 01 | 0 |
| 14. | ತಿಪಟೂರು | 0 | 01 | 01 | 0 |
| 15. | ಚಿಕ್ಕನಾಯಕನಹಳ್ಳಿ | 0 | 0 | 0 | 0 |
| 16. | ಗುಬ್ಬಿ | 0 | 0 | 01 | 0 |
| 17. | ಶಿರಾ | 0 | 0 | 01 | 0 |
| 18. | ಕೊರಟಗೆರೆ | 0 | 01 | 02 | 0 |
| 19. | ಮಧುಗಿರಿ | 0 | 0 | 01 | 0 |
| 20. | ಪಾವಗಡ | 0 | 0 | 0 | 0 |
| | **ಒಟ್ಟು** | **02** | **03** | **13** | **0** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಈ ಜಿಲ್ಲಾ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಕಳ್ಳತನ ಮತ್ತು ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳ ಸಂಖ್ಯೆಯು 2024ನೇ ಹೋಲಿಕೆ ಮಾಡಿದ್ದಲ್ಲಿ 2025ನೇ ಸಾಲಿಗೆ ಇಳಿಮುಖವಾಗಿರುತ್ತದೆ. ಇತರೆ ಕಳವು ಪ್ರಕರಣಗಳು ಶೇ.15% ರಷ್ಟು ಕಡಿಮೆಯಾಗಿರುತ್ತವೆ. |
| ಇ) | ಬಂದಿದ್ದಲ್ಲಿ, ಕಳ್ಳತನ ಮತ್ತು ದರೋಡೆ ಪ್ರಕರಣಗಳನ್ನು ನಿಯಂತ್ರಣ ಮಾಡಲು ಸರ್ಕಾರ | ದರೋಡೆ ಪ್ರಕರಣಗಳು 2024ನೇ ಸಾಲಿಗೆ ಹೋಲಿಕೆ ಮಾಡಿದ್ದಲ್ಲಿ 2025ನೇ ಸಾಲಿನಲ್ಲಿ ಹೆಚ್ಚಾಗಿದ್ದು, ಈ ಎಲ್ಲಾ ಪ್ರಕರಣಗಳು ಗೊತ್ತಿರುವ ಆರೋಪಿಗಳು ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಂಡು |

| | | |
|---|---|---|
| | ಯಾವ ಕ್ರಮ ಕೈಗೊಂಡಿದೆ. | ಅವರುಗಳ ಮಧ್ಯೆ ಗಲಾಟೆ ಸಮಯದಲ್ಲಿ ಬೆಲೆ ಬಾಳುವ ವಸ್ತುಗಳನ್ನು ಕಿತ್ತುಕೊಂಡಿರುವ ಬಗ್ಗೆ ದೂರುಗಳು ಇರುವುದರಿಂದ ಈ ಪ್ರಕರಣಗಳಲ್ಲಿ ಏರಿಕೆಯಾಗಿರುತ್ತವೆ.<br><br>**ಕಳ್ಳತನ ಮತ್ತು ದರೋಡೆ ಪ್ರಕರಣಗಳನ್ನು ನಿಯಂತ್ರಣ ಮಾಡಲು ಮತ್ತು ತಡೆಗಟ್ಟಲು ಕೈಗೊಂಡ ಕ್ರಮದ ವಿವರಗಳು ಈ ಕೆಳಕಂಡಂತಿದೆ: -**<br>• ರಾಜ್ಯ ಪೊಲೀಸ್ ಇಲಾಖೆಯು MCCTNS (Mobile Crime and Criminal Tracking Network System) is a mobile-first, AI-Enabled Application and Portable Scanner System ಅನ್ನು ಜಾರಿಗೆ ತಂದು, ಆ ಮೂಲಕ ಆರೋಪಿಗಳ ಮೇಲೆ ನಿಗಾ ವಹಿಸುವುದು ಹಾಗೂ ಅವರ ಚಲನವಲನವನ್ನು ಟ್ರ್ಯಾಕ್ ಮಾಡುವುದು.<br>• ಪಬ್ಲಿಕ್ ಸೇಫ್ಟಿ ಕಾಯ್ದೆ ಅಡಿಯಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಗಳನ್ನು ಅಳವಡಿಸಲಾಗಿದೆ.<br>• ಎಂ.ಓ. ಆಸಾಮಿಗಳ ಮೇಲೆ ನಿಗಾ ಮತ್ತು ಅಂತರ್ ರಾಜ್ಯ ಆರೋಪಿಗಳ ಮತ್ತು ಕಾರಾಗೃಹಗಳಿಂದ ಬಿಡುಗಡೆಯಾಗಿ ಬಂದ ಆರೋಪಿಗಳ ಮೇಲೆ ನಿಗಾ ಇಡುವುದು.<br>• ಕೋರ್ಟ್ ಮಾನಿಟರಿಂಗ್ ಸೆಲ್‌ಗಳ ಮೂಲಕ ನ್ಯಾಯಾಲಯಗಳಿಂದ ಹೊರಡಿಸುವ ಎನ್.ಬಿ.ಡಬ್ಲ್ಯೂಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದು.<br>• ಇ-ಬೀಟ್ ಸಿಸ್ಟಮ್ (E-beat System) ಅನ್ನು ಅಳವಡಿಸಲಾಗಿದೆ.<br>• ಅಪರಾಧ ಪ್ರಕರಣಗಳನ್ನು ತ್ವರಿತವಾಗಿ ವೈಜ್ಞಾನಿಕ ಮತ್ತು ತಾಂತ್ರಿಕ ಆಧಾರದ ಮೇಲೆ ತನಿಖೆಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು SOCO (Scene of Crime Officer) ಅಧಿಕಾರಿಗಳನ್ನು ನಿಯೋಜಿಲಾಗಿದೆ.<br>• ಅಪರಾಧ ಪ್ರಕರಣಗಳಲ್ಲಿ ನಿಗದಿತ ಅವಧಿಯೊಳಗೆ (60/90 ದಿನಗಳು) ದೋಷಾರೋಪಣಾ ಪಟ್ಟಿಗಳನ್ನು ಸಲ್ಲಿಸುವ ಕುರಿತಂತೆ ರಾಜ್ಯದ Nodal Officer ಆಗಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಅಪರಾಧ ಮತ್ತು ತಾಂತ್ರಿಕ ಸೇವೆ ರವರನ್ನು ನೇಮಕ ಮಾಡಲಾಗಿದೆ.<br>• ಹೆದ್ದಾರಿ ಗಸ್ತು ವಾಹನ (Highway Patrolling Vehicle) ಕರ್ತವ್ಯ ನಿರ್ವಹಿಸುತ್ತಿದ್ದು, ಹೆದ್ದಾರಿಗಳಲ್ಲಿ ರಾಜ್ಯದ ಸಾರ್ವಜನಿಕ ಸುರಕ್ಷತೆಗೆ ಶ್ರಮಿಸಲಾಗುತ್ತಿದೆ.<br>• ಸ್ವತ್ತಿನ ಪ್ರಕರಣಗಳು ದಾಖಲಾದ ತಕ್ಷಣವೇ ಸ್ವತ್ತು ಮತ್ತು ಆರೋಪಿತರ ಪತ್ತೆ ಕುರಿತು ಕ್ರಮ ಕೈಕೊಳ್ಳಲಾಗುತ್ತಿದೆ.<br>• ಠಾಣಾ ಸರಹದ್ದುಗಳಲ್ಲಿ ಹಾದು ಹೋಗುವ ರಾಷ್ಟ್ರೀಯ & ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ಚೆಕ್ ಪೋಸ್ಟ್ ನಿರ್ಮಿಸಿ, ಸಂಶಯಾಸ್ಪದ ವ್ಯಕ್ತಿ ಮತ್ತು ವಾಹನಗಳ ತಪಾಸಣೆ ನಿರಂತರವಾಗಿ ಮಾಡಲಾಗುತ್ತಿದೆ.<br>• ರಾತ್ರಿ ಗಸ್ತು ಕರ್ತವ್ಯಕ್ಕೆ ಪ್ರತಿ ಠಾಣೆಗಳಿಗೆ ದ್ವಿಚಕ್ರ ವಾಹನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅಲ್ಲದೇ ವಾಹನಗಳಿಗೆ ಅಳವಡಿಸಲಾದ ಸೈರನ್ ಹಾಗೂ ರೆಡ್ ಲೈಟ್‌ಗಳು ಹಚ್ಚಿಕೊಂಡು ರಾತ್ರಿ ಗಸ್ತನ್ನು ಮಾಡಲು ಸೂಚಿಸಲಾಗಿದೆ.<br>• ಹಗಲು ಮತ್ತು ರಾತ್ರಿ ಕಳ್ಳತನ ಹಾಗೂ ದರೋಡೆ ಮತ್ತು ಇತರೆ ಪ್ರಕರಣಗಳು ನಡೆದ ಬಗ್ಗೆ ದೂರವಾಣಿ ಕರೆಗಳು ಬಂದಲ್ಲಿ ತಕ್ಷಣ ಸ್ಪಂದಿಸಲು ERSS-112 ವಾಹನಗಳ ಉಸ್ತುವಾರಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಸೂಚಿಸಲಾಗಿದೆ.<br>• ಈ ಹಿಂದೆ ಹಗಲು, ರಾತ್ರಿ ಕಳ್ಳತನ ಹಾಗೂ ದರೋಡೆ ಮತ್ತು |

ಇತರೆ ಸ್ವತ್ತಿನ ಅಪರಾಧವೆಸಗಿದ ಆರೋಪಿತರ ಮೇಲೆ ಎಂ.ಓ.ಬಿ ಕಾರ್ಡ್ ತೆಗೆಯಲಾಗಿರುತ್ತದೆ. ಅವರನ್ನು ಅನಿರೀಕ್ಷಿತವಾಗಿ ಚೆಕ್ ಮಾಡಲಾಗುತ್ತಿದೆ. ಅವರ ಕಾರ್ಯಚಟುವಟಿಕೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.

- ಅಪರಾಧಗಳನ್ನು ತಡೆಗಟ್ಟಲು ಬಾರ್ಡರ್ ಕ್ರೈಂ ಮೀಟಿಂಗ್ ಮಾಡಲಾಗುತ್ತಿದೆ. ಸ್ವತ್ತಿನ ಪ್ರಕರಣಗಳಲ್ಲಿ ಭಾಗಿಯಾದ ವ್ಯಕ್ತಿಗಳ ಕುರಿತು ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳಲಾಗುತ್ತಿದೆ.
- ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬರುವಂತಹ ಟೋಲ್‌ಗಳಲ್ಲಿ ಅಳವಡಿಸಿರುವ ಸಿಸಿಟಿವಿಗಳನ್ನು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿಗಳನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡಲಾಗುತ್ತಿದೆ.
- ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಹಿತದೃಷ್ಟಿಯಿಂದ **ಮನೆ-ಮನೆಗೆ ಪೊಲೀಸ್** ಎಂಬ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.
- ರಾತ್ರಿ ಬೀಟ್ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರು ಕಡ್ಡಾಯವಾಗಿ ಆಯುಧ ಮತ್ತು ಮದ್ದು ಗುಂಡುಗಳನ್ನು ತೆಗೆದುಕೊಂಡು ಹೋಗಲು ಸೂಚಿಸಲಾಗಿದೆ.
- ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಲು ಪ್ರತಿಯೊಬ್ಬ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ MCCTNS ಮೊಬೈಲ್ ಅಪ್ಲಿಕೇಶನ್ ಬಳಸಲು ಸೂಚಿಸಲಾಗಿರುತ್ತದೆ.
- ಜ್ಯುವೆಲರಿ ಅಂಗಡಿ ಮತ್ತು ಬ್ಯಾಂಕ್‌ಗಳಂತಹ ಸೂಕ್ಷ್ಮ ಸ್ಥಳಗಳಿಗೆ ವಿಶೇಷ ಭದ್ರತಾ ಎಚ್ಚರಿಕೆಗಳನ್ನು ನೀಡಲಾಗಿದೆ.
- ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆಯನ್ನು ಮತ್ತು ಅರಿವು/ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಳ್ಳತನ ಪ್ರಕರಣಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.
- ಸಾರ್ವಜನಿಕರಿಗೆ ಭಯ ಉಂಟಾಗದಂತೆ ಜನಸ್ನೇಹಿ ಪೊಲೀಸ್ ವ್ಯವಸ್ಥೆ ಜಾರಿಯಲ್ಲಿದ್ದು, ಕೀಲಿ ಹಾಕಿದ ಮನೆಗಳನ್ನು ಹಗಲು ಮತ್ತು ರಾತ್ರಿ ಗಸ್ತು ಸಮಯದಲ್ಲಿ ಚೆಕ್ ಮಾಡಲಾಗುತ್ತಿದೆ.
- ಸಾರ್ವಜನಿಕರು ಬೇರೆ ಊರಿಗೆ ಹೋಗಬೇಕಾದರೆ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡಲು & ಬೆಲೆಬಾಳುವ ಬಂಗಾರ & ಹಣವನ್ನು ಸೇಫ್ಟಿ ಲಾಕರ್‌ಗಳಲ್ಲಿ ಇಡಲು ತಿಳಿಸಲಾಗಿದೆ. ಸದರಿ ಮನೆಗಳಿಗೆ ಹಗಲು & ರಾತ್ರಿ ಗಸ್ತು ಸಮಯದಲ್ಲಿ ಹೆಚ್ಚಿನ ನಿಗಾವಹಿಸಲಾಗುತ್ತಿದೆ.
- ನಗರಗಳಲ್ಲಿ ಒಂಟಿಮನೆ ಕಡೆಗೆ ಹೆಚ್ಚಿನ ಗಮನ ಹರಿಸಿ ಗಸ್ತು ಸಮಯದಲ್ಲಿ ನಿಗಾವಹಿಸಲಾಗುತ್ತಿದೆ.
- ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ **"ಆಸರೆ"** ಎಂಬ ಸಮುದಾಯ ಪೊಲೀಸ್ ಎಂಬ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆಯನ್ನು ಮತ್ತು ಅರಿವು/ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಳ್ಳತನ ಪ್ರಕರಣಗಳನ್ನು ನಿಯಂತ್ರಿಸಲು ಕ್ರಮ ಕೈಕೊಳ್ಳಲಾಗಿದೆ.

**ಸಂಖ್ಯೆ: ಹೆಚ್‌ಡಿ 46 ಪಿಸಿಕ್ಯೂ 2026**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು